# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 05
**ಮಾನ್ಯ ಸದಸ್ಯರ ಹೆಸರು** : ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
**ಉತ್ತರಿಸಬೇಕಾದ ದಿನಾಂಕ** : 12-09-2022
**ಉತ್ತರಿಸುವ ಸಚಿವರು** : ಪ್ರವಾಸೋದ್ಯಮ, ಜೀವಿಶಾಸ್ತ್ರ, ಹಾಗೂ ಪರಿಸರ ಸಚಿವರು

| ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಉಡುಪಿ ಜಿಲ್ಲೆಯ ಬಾರ್ಕೂರಿನಲ್ಲಿ 7ನೇ ಶತಮಾನದಲ್ಲಿ ನಿರ್ಮಿಸಿದ ದೇವಸ್ಥಾನ, ಕೋಟೆ, ಅರಮನೆಗಳು ಇದ್ದು ಈ ಐತಿಹಾಸಿಕ ಸ್ಮಾರಕಗಳನ್ನು ಸಂರಕ್ಷಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಈ ಸ್ಮಾರಕಗಳನ್ನು ರಕ್ಷಿಸಲು ಸರ್ಕಾರ ಕಳೆದ 3 ವರ್ಷಗಳಲ್ಲಿ ವೆಚ್ಚ ಮಾಡಿರುವ ಮೊತ್ತ ಎಷ್ಟು; (ವಿವರ ನೀಡುವುದು) | ಉಡುಪಿ ಜಿಲ್ಲೆ, ಉಡುಪಿ ತಾಲ್ಲೂಕು, ಬಾರ್ಕೂರಿನಲ್ಲಿ ಯಾವುದೇ ರಾಜ್ಯ ಸಂರಕ್ಷಿತ ಸ್ಮಾರಕಗಳು ಇರುವುದಿಲ್ಲ.<br><br>ಆದರೆ, ಹೊಸಾಳ (ಬಾರ್ಕೂರು)ದಲ್ಲಿ 12ನೇ ಶತಮಾನಕ್ಕೆ ಸೇರಿದ ಜೋಡಿ ಜೈನ ಮಂಟಪಗಳಿರುವ ಕತ್ತಲೆ ಬಸದಿ ಮತ್ತು ಶಿವಾಲಯವು ರಾಷ್ಟ್ರೀಯ ಸಂರಕ್ಷಿತ ಸ್ಮಾರಕವಾಗಿದ್ದು, ಕೇಂದ್ರ ಸಂಸ್ಕೃತಿ ಮಂತ್ರಾಲಯದ ಅಧೀನದಲ್ಲಿರುವ ಭಾರತೀಯ ಪುರಾತತ್ವ ಸರ್ವೇಕ್ಷಣೆ, ಬೆಂಗಳೂರು ವೃತ್ತ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಈ ಸ್ಮಾರಕದ ಸಂರಕ್ಷಣೆ, ನಿರ್ವಹಣೆ ಮತ್ತು ಅಭಿವೃದ್ಧಿಯನ್ನು ಈ ಇಲಾಖೆಯೇ ಕೈಗೊಳ್ಳಲಿದೆ.<br><br>ಬಾರ್ಕೂರಿನಲ್ಲಿ ಕೋಟೆ ಮತ್ತು ಕಂದಕ ಹಾಗೂ ಅರಮನೆ ಅವಶೇಷಗಳ ಕುರಿತಂತೆ ಭಾರತೀಯ ಪುರಾತತ್ವ ಸರ್ವೇಕ್ಷಣೆ ಮತ್ತು ಎಂ.ಹೆಚ್.ಕೃಷ್ಣ ಇನ್‌ಸ್ಟಿಟ್ಯೂಟ್ ಆಫ್ ಇಂಡಾಲಜಿ ಸಹಯೋಗದೊಂದಿಗೆ 2002 ರಿಂದ 2005 ರವರೆಗೆ ಉತ್ಖನನವನ್ನು ಕೈಗೊಂಡಿರುತ್ತಾರೆ. |
| ಆ) | 7ನೇ ಶತಮಾನದಲ್ಲಿ ಈ ಪ್ರದೇಶವು ತುಳು ಅರಸರ ರಾಜಧಾನಿಯಾಗಿದ್ದು ರಾಜ್ಯಕ್ಕೆ, ದೇಶಕ್ಕೆ ಅವರ ಕೊಡುಗೆಗಳನ್ನು ಸ್ಮರಿಸುವ ನಿಟ್ಟಿನಲ್ಲಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; ಕರಾವಳಿ ಭಾಗದ ಈ ಅರಸರ ಕೊಡುಗೆಗಳನ್ನು ಮಕ್ಕಳಿಗೆ ತಿಳಿಸಲು ಶಾಲಾ ಪಠ್ಯಕ್ರಮದಲ್ಲಿ ಅಳವಡಿಸುವ ಕುರಿತು ಸರ್ಕಾರದ ನಿಲುವೇನು; | ಪ್ರಸ್ತುತ ಜಾರಿಯಲ್ಲಿರುವ 7ನೇ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕದ "ಮೈಸೂರು ಮತ್ತು ಇತರೆ ಸಂಸ್ಥಾನಗಳು" ಅಧ್ಯಾಯದಲ್ಲಿ ತುಳುನಾಡು ಎಂಬ ಪ್ರತ್ಯೇಕವಾದ ಉಪಘಟಕವನ್ನು ನೀಡಲಾಗಿದೆ. ಇದರಲ್ಲಿ ತುಳುನಾಡಿನಲ್ಲಿ ಆಳಿದ ಅರಸು ಮನೆತನಗಳ ಬಗ್ಗೆ, ಆಳುಪ ಮನೆತನದ ಬಗ್ಗೆ, ಬಾರ್ಕೂರು ರಾಜಧಾನಿಯ ಬಗ್ಗೆ ಮಾಹಿತಿ ನೀಡಲಾಗಿದೆ.<br><br>6ನೇ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕದ "ನಮ್ಮ ಹೆಮ್ಮೆಯ ರಾಜ್ಯ ಕರ್ನಾಟಕ" ಎಂಬ ಪಾಠದಲ್ಲಿ ಕರ್ನಾಟಕ ಕರಾವಳಿ ಪ್ರದೇಶ ಆಳುಪ ಮನೆತನದ ಅರಸರ ಬಗ್ಗೆ ಉಲ್ಲೇಖವಿದೆ.<br><br>ಇದಲ್ಲದೆ 6 ರಿಂದ 10ನೇ ತರಗತಿಗೆ ತೃತೀಯ ಭಾಷೆಯಾಗಿ ತುಳು ಪಠ್ಯಪುಸ್ತಕಗಳನ್ನು ಅಳವಡಿಸಲಾಗಿದೆ. ಈ ಪಠ್ಯಪುಸ್ತಕಗಳಲ್ಲಿ ತುಳುನಾಡಿನ ಆಡಳಿತ, ಕಲೆ, ಸಂಸ್ಕೃತಿ, ಭಾಷೆ ಮುಂತಾದವುಗಳ ಬಗ್ಗೆ ಅನೇಕ ಪಾಠ/ಪದ್ಯಗಳನ್ನು ಅಳವಡಿಸಿದೆ.<br><br>ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪ್ರಾಚ್ಯಪ್ರಜ್ಞೆ ಕಾರ್ಯಕ್ರಮವನ್ನು ಸಾರ್ವಜನಿಕ ಶಿಕ್ಷಣಾ ಇಲಾಖೆಯ ಮೂಲಕ ಅನುಷ್ಠಾನ ಗೊಳಿಸುತ್ತಿದ್ದು, ಈ ಕಾರ್ಯಕ್ರಮವು ತಾಲ್ಲೂಕು ಮಟ್ಟ, ಜಿಲ್ಲಾ ಮಟ್ಟ ಮತ್ತು ರಾಜ್ಯ ಮಟ್ಟದಲ್ಲಿ ರಸಪ್ರಶ್ನೆ, ಪ್ರಬಂಧ, ಭಾಷಣ ಮತ್ತು ಚಿತ್ರಕಲಾ ಸ್ಪರ್ಧೆಗಳು ನಡೆಯುತ್ತದೆ. ಇದರಲ್ಲಿ ತುಳುವ ಅರಸರ ಕೊಡುಗೆಗಳ ಕುರಿತಂತೆ ವಿಷಯವನ್ನು ಸೇರ್ಪಡೆಗೊಳಿಸಿ, ಮಕ್ಕಳಿಗೆ ಅರಿವು ಮೂಡಿಸಲು ಕ್ರಮ ಕೈಗೊಳ್ಳಲಾಗುವುದು. |

| | | |
|---|---|---|
| ಇ) | ಈ ಪ್ರದೇಶದಲ್ಲಿ 365ಕ್ಕೂ ಹೆಚ್ಚು ದೇವಾಲಯಗಳಿರುವ ಕುರಿತು ಇತಿಹಾಸದಲ್ಲಿ ದಾಖಲೆ ಇದ್ದು, ಈ ದೇವಾಲಯಗಳ ರಕ್ಷಣೆಗಾಗಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಇದರಲ್ಲಿ ಎಷ್ಟು ದೇವಾಲಯಗಳು ಪುರಾತತ್ವ ಇಲಾಖೆಯ ಸುಪರ್ಧಿಯು ನಿರ್ವಹಣೆಯಲ್ಲಿವೆ? (ಹೆಸರಿನೊಂದಿಗೆ ವಿವರ ನೀಡುವುದು) | ಬಾರ್ಕೂರು ಆಲುಪರ ರಾಜಧಾನಿಯಾಗಿತ್ತು ಹಾಗೂ ಹೊಯ್ಸಳ ಸಾಮ್ರಾಜ್ಯದ ಪ್ರಾಂತೀಯ ರಾಜಧಾನಿಯಾಗಿತ್ತು. ಇವತ್ತಿಗೂ ಪುರಾತನ ಕೋಟೆಗಳ ಅವಶೇಷಗಳನ್ನು ಇಲ್ಲಿ ನೋಡಬಹುದು. ಇಲ್ಲಿ ವಿಜಯನಗರದ ಕಾಲದಲ್ಲಿ 365 ದೇವಾಲಯಗಳಿದ್ದು, ಇಂದಿಗೂ ಈ ದೇವಾಲಯಗಳ ಅವಶೇಷಗಳನ್ನು ಕಾಣಬಹುದಾಗಿದೆ. ಅಲ್ಲದೇ, ಬಾರ್ಕೂರಿನಲ್ಲಿ 83ಕ್ಕೂ ಹೆಚ್ಚು ಶಾಸನಗಳು ಕಂಡು ಬಂದಿವೆ.<br><br>ಈ ಪ್ರದೇಶದಲ್ಲಿರುವ ಅರಕ್ಷಿತ ಸ್ಮಾರಕಗಳು (Unprotected Monument) ಮತ್ತು ಪ್ರಾಚ್ಯಾವಶೇಷಗಳ ಕುರಿತಂತೆ ರಾಜ್ಯ ಪುರಾತತ್ವ ಇಲಾಖೆಯು ಗ್ರಾಮವಾರು ಸರ್ವೇ ಕಾರ್ಯವನ್ನು ಕೈಗೊಂಡಿದ್ದು, ಸರ್ವೇ ಕಾರ್ಯವು ಪೂರ್ಣಗೊಂಡ ನಂತರ ಈ ಪ್ರದೇಶದಲ್ಲಿರುವ ಸ್ಮಾರಕಗಳ ಕುರಿತಂತೆ ನಿಖರವಾದ ಮಾಹಿತಿಯು ತಿಳಿದು ಬರುತ್ತದೆ.<br><br>ಬಾರ್ಕೂರಿನಲ್ಲಿ ಯಾವುದೇ ರಾಜ್ಯ ಸಂರಕ್ಷಿತ ಸ್ಮಾರಕಗಳು ಇರುವುದಿಲ್ಲ. ಆದರೆ ಹೊಸಾಳ (ಬಾರ್ಕೂರು)ದಲ್ಲಿ 12ನೇ ಶತಮಾನಕ್ಕೆ ಸೇರಿದ ಜೋಡಿ ಜೈನ ಮಂಟಪಗಳಿರುವ ಕತ್ತಲೆ ಬಸದಿ ಮತ್ತು ಶಿವಾಲಯವು ರಾಷ್ಟ್ರೀಯ ಸಂರಕ್ಷಿತ ಸ್ಮಾರಕವಾಗಿದ್ದು, ಕೇಂದ್ರ ಸಂಸ್ಕೃತಿ ಮಂತ್ರಾಲಯದ ಅಧೀನದಲ್ಲಿರುವ ಭಾರತೀಯ ಪುರಾತತ್ವ ಸರ್ವೇಕ್ಷಣೆ, ಬೆಂಗಳೂರು ವೃತ್ತ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಈ ಸ್ಮಾರಕದ ಸಂರಕ್ಷಣೆ, ನಿರ್ವಹಣೆ ಮತ್ತು ಅಭಿವೃದ್ಧಿಯನ್ನು ಈ ಇಲಾಖೆಯೇ ಕೈಗೊಳ್ಳಲಿದೆ. |

**TOR 237 TDV 2022**

**(ಆನಂದ್ ಸಿಂಗ್)**
ಪ್ರವಾಸೋದ್ಯಮ, ಜೀವಿಶಾಸ್ತ್ರ
ಹಾಗೂ ಪರಿಸರ ಸಚಿವರು